


# ದ್ವೈತ

ನನ್ನ ಹೊಲಸು ತುಂಬಿದ
ಪವಿತ್ರ ಆತ್ಮವೇ
ನಾ ನಿನಗಾಗಿ ಇಲ್ಲ
ಪಾದಗಳು ಜಾರುತ್ತವೆ
ಮನದಲ್ಲಿ ಕ್ರೂರ ಮೃಗದಂತೆ
ಹೋರಾಡುತ್ತೇನೆ
ನನ್ನ ಬಸವಳಿದ
ನಾಲಿಗೆ ಅವಳ ಎದೆಗೆ
ಇಳಿಯಲಿ ಆ ಹಾಡು ಇನ್ನು
ಇರುವುದಿಲ್ಲ ಬೆಣಚುಕಲ್ಲುಗಳ ಬಗೆಗೆ
ಅಲ್ಲಿ ಹಕ್ಕಿ ಹಾಡಿನ ರಸವ
ಚುಕ್ಕೆ ಬೆಳಕಿನ ಮುದವ
ಕರಗಿಸಿ ಎದೆಯ ಮೇಲೆ
ಎರೆಯುತ್ತೇನೆ

ಬರಲಿ ಅವರು
ನಾನು ಮುರಿದಿದ್ದು ಅವರ
ಮೂಳೆಯನ್ನಲ್ಲ
ನನ್ನ ಮನಸಿನ ಕೊಳೆತ
ಕಾಮನಬಿಲ್ಲನ್ನು
ಯಾರಿಗೆ ಗೊತ್ತಾಗುತ್ತದೆ
ಗೊಜಗುಡುವ ಬಂಡಿಯಲ್ಲಿ
ಏನಾಗುತ್ತದೆ ಎಂದು

ಸುಮ್ಮನೆ ಇದ್ದೇನೆ ಬೆಕ್ಕಿನ ಹಾಗೆ
ಬೆಂಕಿ ಬಾಡಿದ ಒಲೆಯಲ್ಲಿ

ಮೌನ ನನ್ನನ್ನು
ಒಯ್ಯುತ್ತದೆ ದಿಗಂತದಂಚಿಗೆ
ಈಗ ಇಲ್ಲೇ ಇದ್ದು
ಆಕಾಶವ ಕುಡಿಯಬೇಕು.

● ರಾಜು ಹೆಗಡೆ
ಕಲೆ: ಡಿ.ಕೆ. ರಮೇಶ್